## ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಇ.ಸಿ.ಎ ನಂಃ **10/2023**

**ಪಿ .ಡಬ್ಲ್ಯೂಃ 1,**

ದಿನಾಂಕ : 07-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಎಸ್. ಎಸ್. ಎ. ಎದುರುದಾರ ಪರ ವಕೀಲರಿಂದ :

ನನ್ನ ಮಗ ಸಿದ್ದು ಅಪಘಾತ ಆದ ಬಗ್ಗೆ ದೂರು ಸಲ್ಲಿಸಿರುತ್ತಾನೆ. ದೂರು ಸಲ್ಲಿಸುವಾಗ ಸಿದ್ದುನಿಗೆ 34 ವರ್ಷ ಇತ್ತು. ಅಪಘಾತ ಆದಾಗ ನನಗೆ 51-52 ವಯಸ್ಸಾಗಿತ್ತು ಎಂದರೆ ಸರಿ. ನಾನು 1 ನೇ ಎದುರುದಾರ ಸಂಸ್ಥೆಯಲ್ಲಿ ಕಾರ್ಮಿಕ ಎಂದು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಮತ್ತು ರೂ.25,000/- ತಿಂಗಳಿಗೆ ಸಂಬಳ ಪಡೆಯುತ್ತಿದ್ದೆ ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲಾ ಎಂದರೆ ಸರಿ. ಯಾವುದೇ ಟ್ರ್ಯಾಕ್ಟರ್ ಟ್ರಾಲಿಯಲ್ಲಿ ಕೆಲಸಗಾರ ಅಥವಾ ಕಾರ್ಮಿಕ ಆ ಟ್ರಾಲಿಯಲ್ಲಿ ನಿಲ್ಲುವುದು ಮತ್ತು ಕುಳಿತುಕೊಳ್ಳವುದು ಅನುಮತಿ ಇಲ್ಲಾ ಎಂದರೆ ಸರಿ. ದೂರನ್ನು ನನ್ನ ಮಗ ಒಂದು ವಾರದ ಮೇಲೆ ದೂರು ಸಲ್ಲಿಸಿದ್ದಾನೆ ಎಂದರೆ ಸರಿ. ಆಗ ಸಾಕ್ಷಿ ನಾನು ಆಸ್ಪತ್ರೆಯಲ್ಲಿ ಇದ್ದೆ ಎಂದು ನುಡಿಯತ್ತಾರೆ. ನನ್ನ ಮಗ ಸೇಡಂನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾನೆ, ಆತ ಎಲ್ಲಿಯವರೆಗೆ ಓದಿದ್ದಾನೆ ಎಂದು ನನಗೆ ಗೊತ್ತಿಲ್ಲಾ.

ಅಪಘಾತ ಆದ ತಕ್ಷಣ ನನ್ನನ್ನು ಸೇಡಂ ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದರು ಎಂದರೆ ಸಾಕ್ಷಿ ನನ್ನ ಕಲಬುರಗಿಯ ಮನೂರ ಆಸ್ಪತ್ರೆಗೆ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ದಿ: 27-05-2023 ರಂದು ನನಗೆ ಸೇಡಂ ವ್ಯಾಪ್ತಿಯಲ್ಲಿ ಅಪಘಾತ ಆಗಿದ್ದು ಅಪಘಾತ ಆದ ನಂತರ ನನ್ನನ್ನು ಸೇಡಂ ಸರಕಾರಿ ಆಸ್ಪತ್ರೆಗೆ ಸೇರಿಸಲಾಗಿ ನನ್ನ ಮಗ ಬಂದು ನೋಡಿದ ನಂತರ ಅದೇ ದಿನ ಫಿರ್ಯಾದಿ ಕೊಡಬಹುದಿತ್ತು ಎಂದರೆ ಸಾಕ್ಷಿ ಆ ದಿನ ನನ್ನ ಆರೋಗ್ಯ ತುರ್ತು ಪರಿಸ್ಥಿತಿಯಲ್ಲಿದ್ದ ಕಾರಣ ದೂರು ಸಲ್ಲಿಸಿಲ್ಲಾ ಎಂದು ನುಡಿಯುತ್ತಾರೆ. ಸೇಡಂನಲ್ಲಿ ಸರಕಾರಿ ಆಸ್ಪತ್ರೆ ಮತ್ತು ಪೋಲಿಸ ಠಾಣೆ ಸಮೀಪ ಇವೆ ಎಂದರೆ ಸರಿ, ಯಾವುದೇ ಅಪಘಾತ ಆದ ನಂತರ ಸರಕಾರಿ ಆಸ್ಪತ್ರೆಗೆ ಸೇರಿಸಿದ ಮೇಲೆ ಆಸ್ಪತ್ರೆಯವರು ಎಮ್ ಎಲ್ ಸಿ ಕಳುಹಿಸಿತ್ತಾರೆ ಎಂದರೆ ಸರಿ. ಆ ದಿನ ಯಾವುದೇ ಅಪಘಾತ ಆಗಿಲ್ಲಾ, ನಾನು 1 ನೇ ಎದುರುದಾರ ಜೊತತೆ ಮಿಲಾಫೆ ಆಗಿ ನಂತರ ಯೋಚಿಸಿ 7 ದಿನಗಳ ನಂತರ ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ , ನಾನು ಸುಳ್ಳು ಮಾಹಿತಿ ನೀಡಿ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಿ:27-05-2023 ರಂದು ಆ ದಿನ

1 ನೇ ಎದುರುದಾರ ಟ್ರಾಕ್ಟರ್ ಮೇಲೆ ಕೆಲಸಕ್ಕೆ ಹೋದಾಗ ನನಗೆ ಅಪಘಾತ ಆಗಿ ಗಾಯಗಳೂ ಆಗಿವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಬಳಿ ಕೆಲಸಕ್ಕೆ ಹೋಗಿಲ್ಲಾ, ಸದರಿ ಘಟನೆ ಕೆಲಸ ವೇಳೆಯಲ್ಲಿ ಆಗಿಲ್ಲಾ, ನಾನು ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿ: 27-05-2023 ರಿಂದ 3-6-2023 ರವರೆಗೆ ಆಸ್ಪತ್ರೆಗೆ ದಾಖಲಾಗಿ ಆ ವೇಳೆಯಲ್ಲಿ ನನಗೆ ರೂ.2.50 ಲಕ್ಷ ಹಣ ಖರ್ಚ ಆಯಿತು ಎಂದು ಮತ್ತು ಮುಂದುವರೆದ ಚಿಕಿತ್ಸೆಗಾಗಿ ರೂ. 2 ಲಕ್ಷ ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲಿಕ ಅಂತಾ ಯಾವುದೇ ಸಂಬಂಧ ಇಲ್ಲಾ ಮತ್ತು ಈ ಘಟನೆ ಆ ದಿನ ನಡೆದಿಲ್ಲಾ ಎಂದರೆ ಸರಿಯಲ್ಲ. ನನಗೆ ಅಪಘಾತ ಆದ ದಿನದಂದು ನನಗೆ ರೂ.25,000/- ಸಂಬಳ ಇತ್ತು ಮತ್ತು ಆ ದಿನ ನನಗೆ 49 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಕೇಳಿದ ರೂ 30,50,000/- ಅಥವಾ ಯಾವುದೇ ರೀತಿಯ ಪರಿಹಾರ ಪಡೆಯಲು 2 ನೇ ಎದುರುದಾರರ ನೀಡಲು ಯಾವುದೇ ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ . ಘಟನೆ ಆದ ನಂತರ ನನಗೆ ಎಲ್ಲಾ ಗಾಯಗಳು ವಾಸಿ ಆಗಿ ಮೊದಲಿನಿಗಿಂತ ಹೆಚ್ಚಿಗೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಮೊದಲಿನಂತೆ ಕೆಲಸಕ್ಕೆ ಹೋಗುತ್ತಿದ್ದೇನೆ ಆದರೆ ನನಗೆ ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲಾ. ನಿಪಿ-8 ರಿಂದ 13 ದಾಖಲೆಗಳನ್ನು ನಾನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಸುಳ್ಳು ದೂರುನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**